ಸಭೆಯಲ್ಲಿ ಕುಳಿತಿರುವ ಎಲ್ಲರಿಗೂ ಕೇಳಿಸುವಂತೆ ಗಟ್ಟಿಯಾಗಿ ಹೇಳಿದ ಗರುಡ: 'ದೇವೇಂದ್ರಾ, ನೀನು ಮಾಡುತ್ತಿರುವುದು ಸರಿಯಲ್ಲ. ನೀನು ನನಗೆ ಅವಮಾನ ಮಾಡುತ್ತಿದ್ದೀಯೆ. ಬ್ರಹ್ಮ ಸೃಷ್ಟಿ ಮಾಡುವಾಗಲೇ ನನ್ನ ಆಹಾರ ಯಾವುದೆಂಬುದನ್ನೂ ನಿಶ್ಚಯಿಸಿದ್ದಾನೆ. ಆ ಪ್ರಕಾರ ನಾನು ಈ ನಾಗನನ್ನು ತಿನ್ನುವ ಸಮಯವನ್ನೂ ನಿಶ್ಚಯಿಸಿದ್ದೇನೆ. ಇದರಿಂದ ನನ್ನ ಕುಟುಂಬದ ಭರಣ–ಪೋಷಣವನ್ನೂ ನಾನು ಮಾಡಬೇಕಿದೆ. ಈಗ ಆ ಸುಮುಖನ ಸರದಿ. ಆದರೆ ನಾನು ಆತನನ್ನು ಭುಂಜಿಸುವಂತಿಲ್ಲ. ಅದಕ್ಕೆ ಅವನಿಗೆ ನೀನಿತ್ತಿರುವ ದೀರ್ಘಾಯುಷ್ಯ ಅಡ್ಡಿಯಾಗಿದೆ. ನಿನಿಂದ ನನಗೆ ಘೋರ ಅನ್ಯಾಯವಾಗಿದೆ. ನಾನು ನನ್ನ ಆಹಾರ ಭುಂಜನೆಯ ವಿಷಯವನ್ನು ಪೂರ್ವಭಾವಿಯಾಗಿಯೇ ನಿರ್ಧರಿಸಿರುತ್ತೇನೆ. ಅದು ಯಾವುದು ಮತ್ತು ಯಾವಾಗ ಎಂಬುದು ಪೂರ್ವನಿರ್ಧಾರಿತವಾಗಿರುತ್ತದೆ. ಈ ನಿರ್ಧಾರ ಈಗ ಸಡಿಲವಾಗಿದೆ ನಿನ್ನಿಂದ. ಸುಮುಖನ ಹೊರತಾಗಿ ಈ ಮಾಸದಲ್ಲಿ ನಾನು ಬೇರೆ ಆಹಾರವನ್ನು ಭುಂಜಿಸಲಾರೆ. ಅದಕ್ಕಾಗಿ ಬೇರೆ ಜೀವಿಯನ್ನು ಕೊಲ್ಲಲಾರೆ. ನಿನ್ನ ತಪ್ಪು ನಿರ್ಧಾರದಿಂದ ನಾನೂ ಹಾಗೂ ನನ್ನ ಕುಟುಂಬ ಹಸಿವಿನಿಂದ ಬಳಲುವಂತಾಗಿದೆ'.

ದೇವೇಂದ್ರ ಮಾತನ್ನಾಡದೆ ಸುಮ್ಮನೇ ಕುಳಿತಿದ್ದ. ಮಹಾವಿಷ್ಣುವು ಎಂದಿನಂತೆ ಮುಗುಳ್ನಗುತ್ತಿದ್ದ. ಇಡೀ ಸುಧರ್ಮ ಸಭೆ ಗರಬಡಿದಂತೆ ಮೌನವಾಗಿತ್ತು.

ಸಭೆಯನ್ನೊಮ್ಮೆ ದೃಷ್ಟಿಸಿದ ಗರುಡ ಹೇಳಿದ: 'ನೀವು... ಈ ಸುಧರ್ಮ ಸಭೆಯಲ್ಲಿ ಉಪಸ್ಥಿತರಿರುವ ದೇವಾನುದೇವತೆಗಳಾದ ನೀವು ಮತ್ತು ವಶಿಷ್ಠ ವಿಶ್ವಾಮಿತ್ರರೇ ಮೊದಲಾದ ಮಹಾ ಮುನಿಗಳು ಬಲ್ಲಿರಿ... ನನ್ನ ನಿಜ ಸಾಮರ್ಥ್ಯ ಏನು, ಎಷ್ಟು ಎಂಬುದು ನಿಮಗೆ ಗೊತ್ತು. ನನ್ನ ತಾಯಿಯೂ ಈ ನಿಮ್ಮ ಪ್ರಭು ದೇವೇಂದ್ರನ ತಾಯಿಯ ಹಾಗೆಯೇ ದಕ್ಷ ಪ್ರಜಾಪತಿಯ ಮಗಳು. ತಂದೆಯಂತೂ ಈ ದೇವೇಂದ್ರನ ತಂದೆಯಾದ ಕಶ್ಯಪ ಬ್ರಹ್ಮ. ನನ್ನ ಬಲ, ಶಕ್ತಿ, ಸಾಮರ್ಥ್ಯ ಈ ದೇವೇಂದ್ರನ ಸಾಮರ್ಥ್ಯಕ್ಕಿಂತಲೂ ಕಡಿಮೆಯದಲ್ಲ. ನಾನು ನನ್ನ ಸ್ವಂತ ಸಾಮರ್ಥ್ಯದಿಂದ ಶ್ರುತಶ್ರೀ, ಶ್ರುತಸೇನ, ವಿವಸ್ವಾನ, ರೋಚನಾಮುಖ, ಪ್ರಸೃತ, ಕಾಲಕಾಕ್ಷ ಮೊದಲಾದ ದೈತ್ಯರನ್ನು ಕೊಂದಿದ್ದೇನೆ. ಏನು ಮಾಡಲಿ. ಇಷ್ಟೊಂದು ಶಕ್ತಿ ಸಾಮರ್ಥ್ಯ ಇದ್ದೂ ನಾನು ಪರರ ಸೇವಾವೃತ್ತಿಯನ್ನು ಮಾಡಬೇಕಾಯಿತು. ನನ್ನ ದುರದೃಷ್ಟವೋ ಅಥವಾ ಆ ವಿಷ್ಣುವಿನ ಅದೃಷ್ಟವೋ ಅವನನ್ನು ಹೊತ್ತು ನಾನು ಹಾರಾಡಬೇಕಾಗಿದೆ. ದೇವೇಂದ್ರಾ, ನಾನು ವಿಷ್ಣುವಿನ ಸೇವಕನಾಗಿರುವೆ ಎಂದುಕೊಂಡು ನನಗೆ ಅವಮಾನ ಮಾಡುತ್ತಿರುವೆ. ನನಗೆ ಆಹಾರವಾಗಬೇಕಾಗಿದ್ದ ಆ ನಾಗ ಸುಮುಖನನ್ನು ನನ್ನಿಂದ ಕಸಿದುಕೊಂಡಿದ್ದೀಯೆ. ಇದು ನೀನು ನನಗೆ ಮಾಡುತ್ತಿರುವ ಅವಮಾನ. ನನಗೆ ಅವಮಾನ ಮಾಡಿದ ಹೊಣೆ ನಿಮ್ಮಿಬ್ಬರದೂ – ನಿನ್ನ ಹಾಗೂ ಆ ವಿಷ್ಣುವಿನದು' ಎಂದು ಬುಸುಗುಟ್ಟಿದ ಗರುಡ.



ಅದುವರೆಗೂ ನಸುನಗುತ್ತಾ ದೇವೇಂದ್ರನ ಪಕ್ಕದಲ್ಲಿ ಕೂತಿದ್ದ ಮಹಾವಿಷ್ಣು ನಿಧಾನವಾಗಿ ಮೇಲೆದ್ದ.

'ನಾನು ಹೊರಡುತ್ತಿದ್ದೇ ದೇವರಾಜ' ಎಂದು ದೇವೇಂದ್ರನತ್ತ ತಿರುಗಿ ಹೇಳಿದ ಮಹಾವಿಷ್ಣು.

'ಸ್ವಸ್ಥಾನಕ್ಕೋ ಅಥವಾ...?' ಮೆಲ್ಲನೆ ಕೇಳಿದ ದೇವೇಂದ್ರ.

'ಸದ್ಯ ಗರುಡನ ಕೋಪದ ಉಪಶಮನಕ್ಕೆ. ನಂತರ ಸುಮುಖ–ಗುಣಶೀಲೆಯರ ಪರಿಣಯಕ್ಕೆ...' ಎಂದು ಮಹಾವಿಷ್ಣು ಹೇಳಿದ. ನಡುವೆ ಗರ್ವಭಂಗವೂ ಸೇರಿದೆ' ಎಂದು ಒಂದೊಂದೇ ಪಾವಟಿಗೆಗಳನ್ನು ಇಳಿಯುತ್ತಾ ಮಹಾವಿಷ್ಣು ಗರುಡನ ಬಳಿ ಸಾರಿದ.

ಗರುಡನ ಬಲ ರೆಕ್ಕೆಯ ಮೇಲೆ ತನ್ನ ಹಸ್ತವನ್ನು ಮೆಲ್ಲನೆ ಇರಿಸಿ ಹೇಳಿದ: 'ನಿಜ ವೈನತೇಯ. ನೀನು ಹೇಳಿದ್ದು ನೂರಕ್ಕೆ ನೂರು ಸತ್ಯ. ನಾನಾಗಲೀ, ಈ ದೇವೇಂದ್ರನಾಗಲೀ ನಿನ್ನ ಸಾಮರ್ಥ್ಯವನ್ನು ಅರಿಯಲೇ ಇಲ್ಲ. ನೀನು ಮಹಾ ಬಲಶಾಲಿ. ಹಲವು ದೈತ್ಯರನ್ನು ನಿನ್ನ ಶಕ್ತಿ ಸಾಮರ್ಥ್ಯದಿಂದಲೇ ಸಂಹರಿಸಿದ್ದೀಯೆ. ಈ ದೇವೇಂದ್ರ ಅದನ್ನು ಅರಿಯಲಿಲ್ಲ. ಮಾತ್ರವಲ್ಲ, ಆ ಸುಮುಖ ನಾಗನಿಗೆ ದೀರ್ಘಾಯುಷ್ಯ ನೀಡಿ ನಿನ್ನನ್ನು ಆಹಾರ ವಂಚಿತನಾಗಿ ಮಾಡಿದ್ದಾನೆ. ಆದರೆ ಒಬ್ಬ ನಾಗ ನಿನಗೆ ಸಿಗದೆ ಇದ್ದರೆ ಏನಾಯಿತು? ನಾಗ ಸಂತತಿಗೆ ಬರವೇ? ನಿನ್ನ ಯೋಗ್ಯತೆಗೆ ತಕ್ಕುದಾದ ಆಹಾರ–ನಾಗನನ್ನು ನಾನು ತೋರಿಸುತ್ತೇನೆ. ಏಳು... ನಿನ್ನ ದುಗುಡ ದುಮ್ಮಾನವನ್ನು ಬದಿಗಿಟ್ಟು ನನ್ನನ್ನು ಹೊತ್ತೊಯ್ಯಿ. ನಿನಗೆ ಸುಗ್ರಾಸ ಭೋಜನ ತೋರಿಸುವ ಹೊಣೆ ನನ್ನದು'.

'ನಿಶ್ಚಿತವಾದ ಭೋಜನವನ್ನು ಬಿಟ್ಟು ಬೇರೆಯದನ್ನು ಭುಂಜಿಸುವುದು ಸರಿಯೇ ಮಾಧವಾ?' ಎಂದು ಗರುಡ ಕೇಳಿದ.

'ಹಾಗೆಂದು ಉಪವಾಸದಿಂದಿರುತ್ತೀಯಾ?' ಮರು ಪ್ರಶ್ನಿಸಿದ ಮಹಾವಿಷ್ಣು.

'ಏಳು, ನಿನಗೆ ರುಚಿಕರವಾದ ಭೋಜನವನ್ನು ನಾನು ತೋರಿಸುತ್ತೇನೆ' ಎಂದು ಗರುಡನ ಬಲ ರೆಕ್ಕೆಯ ಮೇಲೆ ತನ್ನ ಹಸ್ತವನ್ನಿರಿಸಿದ. ಮಹಾವಿಷ್ಣುವಿನ ಹಸ್ತದ ಭಾರವನ್ನು ತಡೆಯಲಾರದೆ ಗರುಡ ಕುಸಿದ.

'ಇದೇನು ಗರುಡಾ... ನನ್ನ ಹಸ್ತದ ಭಾರದಿಂದ ನಿನ್ನ ದೇಹ ಕುಸಿಯಿತಲ್ಲಾ!' – ಅಚ್ಚರಿಯ ನಗು ಸೂಸಿ ಕೇಳಿದ ಮಹಾವಿಷ್ಣು.

'ಹಾಗೇನಿಲ್ಲ... ಹಾಗೇನಿಲ್ಲ...' ಎಂದು ಸಾವರಿಸಿಕೊಳ್ಳುತ್ತಾ ಹೇಳಿದ ಗರುಡ. 'ದೂರದಿಂದ ಬಹು ರಭಸದಿಂದ ಹಾರಿ ಬಂದೆ ನೋಡು. ಜೊತೆಗೆ ಇಲ್ಲಿ ಬಂದ ಮೇಲೆ ಸಾಕಷ್ಟು ಒದರಾಡಿದೆ. ಅದರಿಂದ ತುಸು ಆಯಾಸವಾಗಿದೆ ಅಷ್ಟೇ'.

ಮಹಾವಿಷ್ಣು ನಸುನಗುತ್ತಾ ಗರುಡನ ಎಡ ಪಕ್ಕಕ್ಕೆ ಬಂದ. ಗರುಡನ ಎಡ ರೆಕ್ಕೆಯ ಮೇಲೆ ತನ್ನ ಹಸ್ತವನ್ನು ಊರಿದ. ಅದರ ಭಾರಕ್ಕೆ ಗರುಡ ಪೂರ್ತಾ ಪೂರ್ತಿ ಕುಸಿದ.

'ಇದೇನು ಗರುಡ ಮಹಾಶಯ. ದೇವೇಂದ್ರನಿಗಿಂತ ಬಲಶಾಲಿ ನಾನು ಎಂದೆ. ದೈತ್ಯರನ್ನು ಸ್ವಯಂ ಪರಾಕ್ರಮದಿಂದ ಸಂಹರಿಸಿದ್ದೇನೆ ಎಂದೆ. ಅಂಥ ಮಹಾ ಪರಾಕ್ರಮಿ, ಶಕ್ತಿಶಾಲಿ ಈ ನನ್ನ ಹಸ್ತಸ್ಪರ್ಶದಿಂದ ಕುಸಿಯುವುದೇ?'

ಇಡೀ ಸುಧರ್ಮ ಸಭೆ ಗೊಳ್ಳೆಂದು ನಕ್ಕಿತು. ಗರುಡ ನಾಚಿದ. ಆತನ ತಲೆ ತಗ್ಗಿತು. ನತಮಸ್ತಕನಾದ ಗರುಡ.

'ಕ್ಷಮಿಸು ದೇವಾ. ಅಹಂಕಾರದಿಂದ ಆಡಿದ ಮಾತುಗಳು. ಇದುತನಕ ನಾನು ಗರ್ವಲೇಪಿತನಾಗಿದ್ದೆ. ನನ್ನ ತಪ್ಪಿನ ಅರಿವಾಗಿದೆ ದೇವ. ನಿನ್ನೆದುರು ನಾನು ಏನೂ ಅಲ್ಲ. ನಿನ್ನಿಂದಾಗಿಯೇ ನನಗೆ ಶಕ್ತಿ. ನನ್ನಲ್ಲಿಯ ಶೌರ್ಯ ಏನಿದ್ದರೂ ಅದು ನಿನ್ನ ಕೊಡುಗೆ. ನನ್ನದೆನ್ನುವುದು ಏನೂ ಇಲ್ಲ. ನನ್ನ ಅಪರಾಧವನ್ನು ಕ್ಷಮಿಸು' ಎಂದು ಮಹಾವಿಷ್ಣುವಿನ ಕಾಲಿಗೆರಗಿದ ಗರುಡ.

ಗರುಡನನ್ನು ಹಿಡಿದೆತ್ತಿದ ಮಹಾವಿಷ್ಣು, 'ಏಳು ಹೊರಡೋಣ. ನಾಗರಾಜ ಆರ್ಯಕನ ಮೊಮ್ಮಗ ಸುಮುಖ ಹಾಗೂ ಮಾತಲಿಯ ಮಗಳು ಗುಣಶೀಲೆಯ ಪರಿಣಯ ಸಮಾರಂಭವನ್ನು ಕಣ್ತುಂಬಿಸಿಕೊಳ್ಳೋಣ. ಅಲ್ಲಿ ನಿನಗೆ ಸುಗ್ರಾಸ ಭೋಜನವೂ ದೊರೆಯುತ್ತದೆ' ಎಂದ.

ಗರುಡನನ್ನೇರಿ ಮಹಾವಿಷ್ಣು ಸುಮುಖ–ಗುಣಶೀಲೆಯರ ವಿವಾಹಕ್ಕೆ ಹೊರಟ. ಸುಮುಖ ಹಾಗೂ ಗುಣಶೀಲೆಯರ ವಿವಾಹವು ಅತ್ಯಂತ ವೈಭವದಿಂದ ನೆರವೇರಿತು.

ಪ್ರತಿಕ್ರಿಯಿಸಿ: feedback@sudha.co.in